

# ಸೊಪ್ಪಿನ ಬೆಟ್ಟಗಳ ರಕ್ಷಣೆಯಲ್ಲಿ ಕಸುವು ನೀಡಿದ ಮನುವಿಕಾಸ

**ಸೊಪ್ಪಿನ ಬೆಟ್ಟಗಳ ಅಭಿವೃದ್ಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ 'ಮನುವಿಕಾಸ' ಸಂಸ್ಥೆಯು ಮಾದರಿ ಕಾರ್ಯ ಕೈಗೊಂಡಿದೆ. ಕೃಷಿಕರಿಗೆ ಸೊಪ್ಪಿನಬೆಟ್ಟದಲ್ಲಿ ಬೆಳೆಯಲು ರಾಮಪತ್ರೆ, ಉಪ್ಪಾಗೆ, ಮುರುಗಲ, ದಾಲ್ಚಿನಿ, ವಾಟೆಕಾಯಿ, ಅಣಲೆ, ಮಡ್ಡಿಧೂಪ, ಇತರ ಸಸಿಗಳನ್ನು ಹಂಚಲಾಗುತ್ತದೆ. ದಶಕದ ಹಿಂದೆ ಸೊಪ್ಪಿನಬೆಟ್ಟಗಳಲ್ಲಿ ನೆಟ್ಟ ಸಸಿಗಳು ಈಗ ಬೆಳೆದು ವೈವಿಧ್ಯಮಯ ಸೊಪ್ಪಿನ ಹೆಚ್ಚಳ ಉಂಟಾಗಿದೆ. ಪಕ್ಷಿಸಂಕುಲದ ಗಾನವೂ ಮೇಳೈಸಿದೆ.**

**ಗುರುಗಣೇಶ ಭಟ್ ಡಬ್ಗುಳಿ**

ಹೊಸ ಚಿಂತನೆ, ಹುರುಪಿನೊಂದಿಗೆ ಪರಿಸರ ಅರಣ್ಯ ಮತ್ತು ಸುಸ್ಥಿರ ಕೃಷಿಗೆ ಪೂರಕವಾಗಿ ಕೆಲಸ ಮಾಡುತ್ತಿರುವ ಸಂಸ್ಥೆ ಮನುವಿಕಾಸ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಕರ್ಜಗಿ ಗ್ರಾಮದ ಹರಿಶ್ಚಂದ್ರ ಭಟ್ ಅವರು 2003ರಲ್ಲಿ ಮನುವಿಕಾಸ ಸಂಸ್ಥೆಯನ್ನು ಆರಂಭಿಸಿದರು. ಕೃಷಿ, ಪರಿಸರ, ಅರಣ್ಯ ಮತ್ತು ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣದಂತಹ ಹಲವು ಸಂಗತಿಗಳಲ್ಲಿ ಇಂದು ಮನುವಿಕಾಸದ ಹೆಸರು ಎದ್ದುಕಾಣುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಮನುವಿಕಾಸದ ಯೋಜನೆಗಳು ಸಿದ್ಧವಾದವು. ಶೇ. 81 ಅರಣ್ಯದಿಂದಲೇ ಕೂಡಿರುವ ಉತ್ತರ ಕನ್ನಡದ ಜನರ ದೈನಿಕದ ಜೀವನದಲ್ಲಿ ಅರಣ್ಯದ ಮಹತ್ವ ದೊಡ್ಡದು. ಅದರಲ್ಲೂ ವಿಪುಲವಾಗಿರುವ ಅಡಿಕೆ ಬೆಳೆಗಾರರ ಮತ್ತು ಅರಣ್ಯದ ನಡುವೆ ಅವಿನಾಭಾವ ಸಂಬಂಧವಿದೆ. ಆದರೆ ನಾನಾ ಕಾರಣಗಳಿಂದ ಬೆಟ್ಟ ನಾಶವಾಗುತ್ತಿದೆ ಎಂಬುದನ್ನು ಮನಗಂಡು ಮನುವಿಕಾಸವು ರೂಪಿಸಿದ ಯೋಜನೆಯೇ ಬೆಟ್ಟಾ ಲ್ಯಾಂಡ್.

## ರೈತರಿಂದ ರಕ್ಷಣೆ

ಸೊಪ್ಪಿನ ಬೆಟ್ಟಗಳು ಉತ್ತರ ಕನ್ನಡ ಜಿಲ್ಲೆಯ ವಿಶಿಷ್ಟ ಲಕ್ಷಣಗಳಲ್ಲೊಂದು. 40 ಸಾವಿರ ಹೆಕ್ಟೇರ್‌ಗಳಷ್ಟಿರುವ ಇವು ಇಂದಿಗೂ ವಿರಳ ಜಾತಿಯ ಹಲವು ಸಸ್ಯಗಳನ್ನು ಹೊತ್ತು ನಿಂತಿವೆ. ಬೆಳೆಗಳಿಗೆ ಗೊಬ್ಬರವಾಗಿ ಸೊಪ್ಪು, ಜಾನುವಾರುಗಳಿಗೆ ಸಮೃದ್ಧ ಮೇವು ನೀಡುವ ಸೊಪ್ಪಿನ ಬೆಟ್ಟಗಳಿಂದ ಕೃಷಿಕರಿಗೆ ಎದುರಾಗುವ ಪ್ರಯೋಜನ ಮಹತ್ತರವಾದುದು. ಬಹು ಹಿಂದಿನಿಂದಲೂ ಸೊಪ್ಪಿನ ಬೆಟ್ಟದ ಹೆಸರಲ್ಲಿ ಕೃಷಿಕರು ಅರಣ್ಯದ ಜೊತೆ ನಂಟು ಹೊಂದಿದ್ದಾರೆ. ಕಾಲಕಾಲಕ್ಕೆ ತೋಟ ಗದ್ದೆಗೆ ಸೊಪ್ಪುಣಿಸಿದರೆ ಮಣ್ಣಿನ ಫಲವತ್ತತೆಯ ಪ್ರಮಾಣ ಹೆಚ್ಚಾಗುತ್ತದೆ ಎಂಬುದು ಸಾಂಪ್ರದಾಯಿಕ ನಂಬಿಕೆ, ಅಷ್ಟೇ ಅಲ್ಲದೇ ವೈಜ್ಞಾನಿಕವಾಗಿಯೂ ಸತ್ಯ. ಜೊತೆಜೊತೆಗೆ ತೋಟದಲ್ಲಿ ತಂಪೂ ನೆಲೆಸುತ್ತದೆ. ತೋಟದ ಮೇಲ್ಭಾಗದಲ್ಲೇ ಬೆಟ್ಟ ಇರುವುದರಿಂದ ಬಿರುಬಿಸಿಲು ಮತ್ತು ಬೀಸುಗಾಳಿಯಿಂದ ತೋಟವನ್ನು ರಕ್ಷಿಸುತ್ತದೆ. ಅಲ್ಲದೇ ಮಣ್ಣಿನ ಸವಕಳಿಯನ್ನು ತಡೆಗಟ್ಟುವಲ್ಲಿ ಸೊಪ್ಪಿನ ಬೆಟ್ಟದ್ದು ಬಹುದೊಡ್ಡ ಪಾತ್ರ. ಆದರೆ ಇತ್ತೀಚೆಗೆ ಮನಸೋಚ್ಛೆ ಬೆಟ್ಟದ ಗಿಡ, ಮರಗಳನ್ನು ಕಡಿಯುತ್ತಿದ್ದಾರೆಂಬ ಕಟುಸತ್ಯ ಮನಗಂಡು ಆಗುತ್ತಿರುವ ದುಷ್ಪರಿಣಾಮವನ್ನೂ ತಡೆಗಟ್ಟಬೇಕು, ಹಾಗೆಯೇ ಸೊಪ್ಪಿನ ಬೆಟ್ಟಗಳಲ್ಲಿ ಇನ್ನಷ್ಟು ಹಸಿರು ಬೆಳೆಸಬೇಕು ಎಂಬ ಸದುದ್ದೇಶದೊಂದಿಗೆ ಸಾರ್ವಜನಿಕ ಸಹಭಾಗಿತ್ವದೊಂದಿಗೆ ಬೆಟ್ಟಾ ಲ್ಯಾಂಡ್ ಎಂಬ ವಿನೂತನ ಯೋಜನೆಯನ್ನು ಮನುವಿಕಾಸವು ಹಮ್ಮಿಕೊಂಡಿತು.

## ಏನಿದು ಬೆಟ್ಟಾ ಲ್ಯಾಂಡ್?

ಬೆಟ್ಟಾ ಲ್ಯಾಂಡ್ ಯೋಜನೆಯಡಿ ಅಂತರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟವು ಅಳಿವಿನಂಚಿನಲ್ಲಿರುವ ಪ್ರಭೇದಗಳೆಂದು ಗುರುತಿಸಿದ ಸಸ್ಯಗಳನ್ನು ಸುಮಾರು 40 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಉತ್ತರ ಕನ್ನಡದ ಕೃಷಿಕರಿಗೆ ವಿತರಿಸಲಾಯಿತು. ಕೃಷಿಕರು ತಮ್ಮ ಸೊಪ್ಪಿನ ಬೆಟ್ಟದಲ್ಲಿ ಈ ಗಿಡಗಳನ್ನು ನೆಟ್ಟರು. ಸಹಜವಾಗಿ ಗಿಡ ಚಿಗುರಿತು. ಬೆಟ್ಟ ಇನ್ನಷ್ಟು ದಟ್ಟವಾದ ಬೆಟ್ಟವಾಯಿತು. ಮತ್ತಷ್ಟು ಪಕ್ಷಿಗಳು ಬಿಟ್ಟು ಹೋಗಿದ್ದ ಪ್ರಾಣಿ ಸಂಕುಲಗಳು ಮರಳಿದವು. ರಾಮಪತ್ರೆ, ಉಪ್ಪಾಗೆ, ಮುರುಗಲ, ದಾಲ್ಚಿನಿ, ವಾಟೆಕಾಯಿ ಅಣಲೆಕಾಯಿ ಮತ್ತು ಮಡ್ಡಿಧೂಪದಂತಹ ಬೆಲೆಬಾಳುವ ವಿಶಿಷ್ಟ ಅರಣ್ಯ ಉತ್ಪನ್ನಗಳಲ್ಲಿ ಹೆಚ್ಚಳವಾಯಿತು. ಔಷಧೀಯ ಸಸ್ಯಗಳನ್ನು ಸಹ ನೆಡುವ ಮೂಲಕ ನಶಿಸುತ್ತಿರುವ ಸಸ್ಯಸಂಪತ್ತನ್ನು ಉಳಿಸುವಲ್ಲಿ ದಾಪುಗಾಲಿಟ್ಟಿತು. ಜೈವಿಕ ಚಟುವಟಿಕೆ ಗರಿಗೆದರಿತು.

ಮಣ್ಣು ಸವಕಳಿಯಾಗುವುದನ್ನು ಮರೆಯಿತು. ರೈತರ ತೋಟಕ್ಕೆ ದೊರಕುವ ಸೊಪ್ಪಿನ ಪ್ರಮಾಣವೂ ಹೆಚ್ಚಾಯಿತು. ಬೆಟ್ಟದ ಖಾಲಿ ಜಾಗಗಳಲ್ಲಿ ಹಸಿರು ಚಿಗುರಿತು. ಅರಣ್ಯದ ಸಂರಕ್ಷಣೆಯ ಜೊತೆ ಸುಸ್ಥಿರಕೃಷಿಯತ್ತ ತೋಟಿಗರ ಮನಸ್ಸು ವಾಲಲು ಈ ಯೋಜನೆ ಕಾರಣವಾಯಿತು.

ಬೆಟ್ಟಾ ಲ್ಯಾಂಡ್ ಯೋಜನೆಯು ಅರಣ್ಯ ಇಲಾಖೆ ಮತ್ತು ಸ್ಥಳೀಯ ಸಮುದಾಯದ ಸಹಭಾಗಿತ್ವದಲ್ಲಿ ಮನುವಿಕಾಸ ಸಂಸ್ಥೆಯು ನಡೆಸಿದ ಯಶಸ್ವೀ ಯೋಜನೆಗಳಲ್ಲೊಂದು. ಅರಣ್ಯದ ಬಹು ಆಯಾಮದ ಮಹತ್ವವನ್ನು ಅರಿತು ಈ ಯೋಜನೆಯನ್ನು ತಯಾರಿಸಲಾಯಿತು ಎನ್ನುತ್ತಾರೆ ಸಂಸ್ಥೆಯ ವ್ಯವಸ್ಥಾಪಕ ಗಣಪತಿ ಭಟ್.

ಇಷ್ಟೇ ಅಲ್ಲದೇ ಸೊಪ್ಪಿನ ಬೆಟ್ಟಗಳಲ್ಲಿ 150 ಇಂಗು ಗುಂಡಿಗಳನ್ನು ಸಹ ಇದೇ ಯೋಜನೆಯಡಿ ನಿರ್ಮಿಸಲಾಯಿತು. ಸೊಪ್ಪಿನ ಬೆಟ್ಟಗಳ ಮಹತ್ವ ಸಾರುವ ಕಿರು ಪುಸ್ತಕಗಳನ್ನು ವಿತರಿಸಲಾಯಿತು. 2003ರಲ್ಲಿ ಕರ್ಜಗಿಯೆಂಬ ಪುಟ್ಟ ಊರಿನಲ್ಲಿ ಹರಿಶ್ಚಂದ್ರ ಭಟ್ಟರಿಂದ ಮನುವಿಕಾಸವು ಮೊದಲ ಹೆಜ್ಜೆಯಿಟ್ಟಾಗ ಈ ಮಟ್ಟಕ್ಕೆ ಬೆಳೆಯಬಹುದೆಂಬ ಕಲ್ಪನೆಯೂ ಇರಲಿಲ್ಲ. ನಮ್ಮ ಪರಿಸರಕ್ಕಾಗಿ ಏನನ್ನಾದರೂ ಮಾಡಬೇಕೆಂಬ ಧ್ಯೇಯವೇ ಇಂದು ಸಂಸ್ಥೆಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕರೆದೊಯ್ದಿದೆ ಎಂದು ಮನುವಿಕಾಸದ ವ್ಯವಸ್ಥಾಪಕ ಗಣಪತಿ ಭಟ್ ಹೆಮ್ಮೆ ವ್ಯಕ್ತಪಡಿಸುತ್ತಾರೆ.

## ಪರಿಸರ ರಕ್ಷಣೆಯ ಮತ್ತೊಂದು ಮಗ್ಗುಲು

ನೀರು ಗಾಳಿ ಮಣ್ಣಿನಿಂದಲೇ ಪರಿಸರ. ನೀರಿನ ಸಂರಕ್ಷಣೆಯು ಪರಿಸರ ರಕ್ಷಣೆಯ ಮತ್ತೊಂದು ಆಯಾಮ. ಉತ್ತರ ಕನ್ನಡದಂತಹ ಮಲೆನಾಡ ಸೆರಗಿನಲ್ಲೇ ಅಂತರ್ಜಲದ ಪ್ರಮಾಣ ತೀವ್ರ ಇಳಿಮುಖವಾಗಿರುವುದು ಗಂಭೀರ ವಿಷಯ. ಈ ಕುರಿತು ಬದಲಾವಣೆ ತರಬೇಕೆಂಬ ಸದಾಶಯದೊಂದಿಗೆ ಮನುವಿಕಾಸವು ನೀರಿಂಗಿಸುವ ಗುಂಡಿಗಳನ್ನು ನಿರ್ಮಿಸಲು ಮುಂದಾಯಿತು.

ಮೂರು ವರ್ಷದ ಹಿಂದೆ ಸಿದ್ದಾಪುರದ ಮೂಡಳ್ಳಿಯಲ್ಲಿ ಮನುವಿಕಾಸ ನಿರ್ಮಿಸಿದ ಸರಣಿ ನೀರಿಂಗಿಸುವ ಹೊಂಡಗಳಿಂದ ಆ ಭಾಗದಲ್ಲಿ ಅಂತರ್ಜಲದ ಮಟ್ಟ ಹೆಚ್ಚಾಗಿದೆ. ಬಿರು ಬೇಸಿಗೆಯಲ್ಲೂ ಹಸಿರು ಉಸಿರಾಡುತ್ತಿದೆ. ಪ್ರತಿ ಇಂಗುಗುಂಡಿಗಳೂ ಸಾವಿರ ಲೀಟರಿಗಿಂತಲೂ ಹೆಚ್ಚಿನ ನೀರನ್ನು ಇಂಗಿಸುವ ತಾಕತ್ತು ಹೊಂದಿವೆ. ಇನ್ನಷ್ಟು ಇಂಗುಗುಂಡಿಗಳ ನಿರ್ಮಾಣ ಮಾಡಲು ಬೇರೆ ಕಾರಣ ಬೇಕೇ?

## ಹೂಳು ನಿವಾರಣೆ

ಶಿರಸಿ ತಾಲೂಕಿನ ಬನವಾಸಿ ಸಮೀಪ ನಿರ್ಮಿಸಲಾಗಿದ್ದ ಕೆರೆಗಳಲ್ಲಿ ಹೂಳು ತುಂಬಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿತ್ತು. ಕೆರೆಗಳ ಮಹತ್ವವರಿತ ಮನುವಿಕಾಸವು ಕದಂಬರ ಕಾಲದ ನರೂರು, ತಿಗಣಿ, ಹೊಸೂರು ಸೇರಿದಂತೆ ಒಟ್ಟು 7 ಕೆರೆಗಳನ್ನು ಸ್ಥಳೀಯರ ಮತ್ತು ಕೋಕೋಕೋಲಾ ಫೌಂಡೇಶನ್ನಿನ ಸಹಭಾಗಿತ್ವದಲ್ಲಿ ಹೂಳಿನಿಂದ ಮುಕ್ತಗೊಳಿಸಿತು. ಬನವಾಸಿ ಭಾಗದಲ್ಲಿ ಎದುರಾಗಿದ್ದ ಜಲಕ್ಷಾಮವನ್ನು ಎದುರಿಸಲು ಕೆರೆಗಳು ಸಜ್ಜಾದವು. ಆ ಭಾಗದ ರೈತರ ಮೊಗದಲ್ಲಿ ಮಂದಹಾಸ ಮೂಡಿತು. ಅಲ್ಲದೇ 164 ಎಕರೆಯ ಗುಡ್ನಾಪುರ ಕೆರೆಯ ಹೂಳೆತ್ತಿದ್ದು ಮತ್ತೊಂದು ರೋಚಕ ಕಥೆ. ಹೀಗೆ ಕೆರೆಗಳ ಪುನರುತ್ಥಾನದ ಮೂಲಕ ರೈತ ಸಮುದಾಯಕ್ಕೆ ಸಹಾಯಹಸ್ತ ಒದಗಿಸುವಲ್ಲಿ ಮನುವಿಕಾಸ ಸಕ್ರಿಯ ಪಾತ್ರವಹಿಸುತ್ತಿದೆ. ಪರಿಸರದ ವಿವಿಧ ಘಟಕಗಳನ್ನು ರಕ್ಷಿಸುವತ್ತ ದೃಷ್ಟಿ ಹಾಯಿಸುವ ಮೂಲಕ ಕಾಡಿನ ಸಂವರ್ಧನೆಯ ಮಹಾಕಾರ್ಯಕ್ಕೆ ಬೋನಸ್ ಅಂಕಗಳನ್ನು ಒದಗಿಸಿದೆ. ನೀರುಳಿದರೆ ಗಿಡ ಮರ ಬೆಟ್ಟ ಅಡವಿ ಎಲ್ಲವೂ ಇನ್ನಷ್ಟು ಮತ್ತಷ್ಟು ಪೊಗದಸ್ತಾಗಿ ಬೆಳೆಯುತ್ತವೆ ಎಂಬ ಸಾಂಪ್ರದಾಯಿಕ ಜ್ಞಾನವನ್ನು ವೈಜ್ಞಾನಿಕವಾಗಿ ಕಾರ್ಯರೂಪಕ್ಕಿಳಿಸುತ್ತಿದೆ.

ಅರಣ್ಯವೆಂದರೆ ನಮ್ಮನ್ನು ಕಾಪಿಡುವ ಶಕ್ತಿ. ಮಲೆನಾಡಿಗರ ಬದುಕಲ್ಲಂತೂ ಆರ್ಥಿಕ ಸಾಮಾಜಿಕ ಮತ್ತು ದೈವಿಕ ಒಡನಾಡಿಯಾಗಿ ಬೆಟ್ಟಗಳು ಕಾರ್ಯನಿರ್ವಹಿಸುತ್ತವೆ. ಇಂತಹ ಬೆಟ್ಟಗಳನ್ನು ರಕ್ಷಿಸುವ ಮತ್ತು ಸರಿಯಾಗಿ ಬಳಸಿಕೊಳ್ಳುವ ಪ್ರಜ್ಞೆಯನ್ನು ಮಲೆನಾಡ ಕೃಷಿಕರಲ್ಲಿ ಮೂಡಿಸುವಲ್ಲಿ ಮನುವಿಕಾಸ ಸಂಸ್ಥೆಯ ಪಾತ್ರ ಮಹತ್ವದ್ದು. ಸರ್ಕಾರ ಮಾಡಬೇಕಿದ್ದ ಎಷ್ಟೋ ಕೆಲಸಗಳ ಜವಾಬ್ದಾರಿಯನ್ನು ಮನುವಿಕಾಸ ಹೆಗಲಿಗೇರಿಸಿಕೊಂಡು ಮುನ್ನುಗ್ಗುತ್ತಿದೆ. ಜನರಲ್ಲಿ ತಮ್ಮೂರಿನ ಅರಣ್ಯವನ್ನು ಸ್ವತಃ ತಾವೇ ರಕ್ಷಣೆ ಮಾಡುವ ಮನಸ್ಥಿತಿ ಸೃಷ್ಟಿಸುತ್ತಿದೆ. ಇದು ಈ ಹೊತ್ತಿನ ನಮ್ಮೆಲ್ಲರ ತುರ್ತು ಎಂದು ಸದಾಕಾಲ ಅನಿಸುತ್ತದೆ. ಅರಣ್ಯದ ಕಾಳಜಿ ಪ್ರೀತಿಗೆ ಮೂರ್ತರೂಪ ನೀಡುತ್ತ ನಿಜವಾದ ಮನುವಿಕಾಸಕ್ಕೆ ಕೊಡುಗೆ ನೀಡುತ್ತಿರುವ ಮನುವಿಕಾಸದಂಥಹ ಮನಸುಗಳು ಹೆಚ್ಚಾಗಲಿ. ನಾವು ನಮ್ಮ ಭುಜವನ್ನೂ ಆದಷ್ಟು ಬೇಗ ಮುಟ್ಟಿಕೊಳ್ಳೋಣ. ಒಂದಿಷ್ಟು ಭಾರ ಹೊರುವುದನ್ನು ಕಲಿಯೋಣ.

